ಗುತ್ತಿಗೆಯನ್ನು ಕೊನೆಗೊಳಿಸಿ, ಬಾಕಿ ಉಳಿದ ಕೆಲಸವನ್ನು ಬೇರೆ ಗುತ್ತಿಗೆದಾರರಿಂದ ಮಾಡಿಸಲು ಪ್ರಯತ್ನ ಪಡಲಾಯಿತು. ಆದರೆ ಈ ಬಾಕಿ ಕೆಲಸವನ್ನು ಮಾಡಲು ಯಾವ ಗುತ್ತಿಗೆದಾರರೂ ಮುಂದೆ ಬರಲಿಲ್ಲವಾಗಿ ಈ ಬಾಕಿ ಕೆಲಸವನ್ನು ಇಲಾಖಾವತಿಯಿಂದ ತೆಗೆದುಕೊಳ್ಳಲು ಯೋಚಿಸಲಾಗಿದೆ.

ವೇದಗಂಗಾ ಮತ್ತು ದೂದಗಂಗಾ ನದಿಗಳ ಮೇಲೆ ಸೇತುವೆ ನಿರ್ಮಾಣದ ಬಗ್ಗೆ

೬೩೩. ಶ್ರೀ ವೀರಕುಮಾರ ಎ. ಪಾಟೀಲ (ನಿಪ್ಪಾಣಿ).—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ, ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆ. ಚಿಕ್ಕೋಡಿ ತಾಲ್ಲೂಕಿನಲ್ಲಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೪ರಲ್ಲಿ ವೇದಗಂಗಾ ಮತ್ತು ದೂದಗಂಗಾ ನದಿಗಳ ಮೇಲೆ ಸೇತುವೆ ನಿರ್ಮಾಣ ಕಾರ್ಯಕ್ಕೆ ಸರ್ವೆಕ್ಷಣೆ ಭೂಮಾಪನಾ ಕಾರ್ಯ (ಪ್ರೋಜಣಿ ಕೆಲಸ) ಮುಗಿದಿದೆಯೆ.

ಆ) ಹಾಗಿದ್ದರೆ ಸದರಿ ಕೆಲಸಗಳ ಅಂದಾಜು ಮೌಲ್ಯ.

ಇ) ಈ ಸೇತುವೆ ಕೆಲಸಗಳಿಗಾಗಿ ಭೂಮಿ ಕಳೆದುಕೊಂಡವರಿಗೆ ಪರಿಹಾರ ನೀಡಲ್ಪಟ್ಟಿದೆಯೇ.

ಈ) ಇಲ್ಲವಾದರೆ ಯಾವಾಗ ಕೊಡಲಾಗುವುದು.

ಉ) ಈ ಕೆಲಸಗಳಿಗೆ (ಹಣ) ಹಂಚಿಕೆ ಮಾಡುವುದು ಯಾವಾಗ ಮತ್ತು ಯಾವಾಗ ಕೆಲಸ ಪ್ರಾರಂಭಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಅ) ಹೌದು ಮುಗಿದಿದೆ.

ಆ) ಅಂದಾಜು ಮೌಲ್ಯ ವೇದಗಂಗಾ ನದಿ ಸೇತುವೆ ನಿರ್ಮಾಣ ಕಾರ್ಯಕ್ಕೆ ರೂ. ೪೯–೫೫ ಲಕ್ಷ ರೂ.ಗಳು ದೂದಗಂಗಾ ನದೀ ಸೇತುವೆ ನಿರ್ಮಾಣ ಕಾರ್ಯಕ್ಕೆ ರೂ. ೫೦–೬೭ ಲಕ್ಷಗಳು.

ಇ) ಇನ್ನೂ ನೀಡಿಲ್ಲ.

ಈ) ವಿಶೇಷ ಭೂ ಸ್ವಾಧೀನ ಅಧಿಕಾರಿಯವರು ಅವಾರ್ಡನ್ನು ಪಾಸು ಮಾಡಿದಕೂಡಲೇ ಪರಿಹಾರವನ್ನು ಕೊಡಲಾಗುವುದು.

ಉ) ಈ ಸೇತುವೆ ಕೆಲಸಗಳಿಗೆ ಈಗಾಗಲೇ ಹಣ ಮಂಜೂರಾಗಿದ್ದು ಈ ನಿರ್ಮಾಣ ಕಾರ್ಯಗಳಿಗೆ ಟೆಂಡರುಗಳನ್ನು ಕರೆದು ಗುತ್ತಿಗೆ ನೀಡಿಕೆಯ ಕಾರ್ಯಾಜ್ಞೆ ನೀಡಲಾಗಿದೆ. ಸದ್ಯದಲ್ಲೇ ಕೆಲಸಗಳನ್ನು ಪ್ರಾರಂಭಿಸಲಾಗುವುದು.

ರಾಜ್ಯದಲ್ಲಿ ಇಂಜಿನಿಯರಿಂಗ್ ಪದವೀಧರರ ಬಗ್ಗೆ.

೬೩೪. (ಇ) ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಮ್ಮ ರಾಜ್ಯದಲ್ಲಿ ಹಾಲಿ ನಿರುದ್ಯೋಗಿ ಇಂಜಿನಿಯರಿಂಗ್ ಪದವೀಧರರ ಸಂಖ್ಯೆ ಎಷ್ಟು?

ಆ) ಪ್ರತಿ ವರ್ಷ ಇಂಜಿನಿಯರಿಂಗ್ ಪದವಿಯನ್ನು ಮುಗಿಸುವವರ ಅಂದಾಜು ಸಂಖ್ಯೆ ಎಷ್ಟು ?

ಇ) ಸದರೀ ಪದವೀಧರರಿಗೆ ಉದ್ಯೋಗ ಒದಗಿಸಲು ಸರ್ಕಾರದವರಲ್ಲಿರುವ ಯೋಜನೆಗಳಾವುವು ?